೫ ಬಿ. ಹೆಚ್. ಬನ್ನಿಕೋಡ್
೬ ಎಂ. ಎಸ್. ಪಾಟೀರ್
೭ ಜೆ. ಸಿ. ಮಾದುಸ್ವಾಮಿ
೮ ಗುರುಪಾದಪ್ಪ ನಾಗಮಾರಪಲ್ಲಿ
೯ ಹೆಚ್. ವಿಕಾಂತಯ್ಯ
೧೦ ಉಮೇಶ್ ಕಟ್ಟಿ
೧೧ ಆರ್, ಎಲ್. ಜಾಲಪ್ಪ
೧೨ ಎಂ. ಕೆ. ಪಟ್ಟಣಶೆಟ್ಟಿ
೧೩ ಶಿವಾನಂದ ಹೆಚ್. ಕೌಜಲಗಿ
೧೪ ಸಿ. ಭೈರೇಗೌಡ
೧೫ ಪಿ. ಜಿ, ಆರ್, ಸಿಂಧ್ಯಾ
೧೬ ಬಸವರಾಜ್ ಪಾಟೀಲ್
೧೭ ವಿಜಯಕುಮಾರ್ ಸರನಾಯಕ್
೧೮ ಹೆಚ್. ವೈ. ಮೇಟಿ
೧೯ ಜಿ, ಜಿ. ಯಲ್ಲಿಗುತ್ತಿ
೨೦ ಎಂ. ನಾರಾಯಣಸ್ವಾಮಿ
೨೧ ಬಸವರಾಜ್ ರಾಯರೆಡ್ಡಿ
೨೨ ಸುಭಾಷ್ ಜೋಷಿ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು, ನಿರ್ಣಯಕ್ಕೆ ಅನುಮೋದನೆ ದೊರಕಿತು

೧೯೯೪-೯೫ನೇ ಸಾಲಿನ ಇಲಾಖಾ ಬೇಡಿಕೆಗಳಿಗೆ ಸಂಬಂಧಿಸಿದ ವಿಶೇಷ ಸಮಿತಿಗಳಿಗೆ ಕಾಲಾವಕಾಶ ನೀಡುವ ಬಗ್ಗೆ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು). — ೧೯೯೪-೯೫ನೇ ಸಾಲಿನ ಇಲಾಖಾ ಬೇಡಿಕೆಗಳನ್ನು ಸಂಬಂಧಿಸಿದ ವಿಷಯ ಸಮಿತಿಗಳಿಗೆ ವಿವರವಾಗಿ ಪರಿಶೀಲಿಸಲು ಹಾಗೂ ಸಮಿತಿಯ ವರದಿಗಳನ್ನು ಸದನಕ್ಕೆ ಸಲ್ಲಿಸಲು ಈ ಸದನ ಒಪ್ಪಬಹುದು. ಮತ್ತು ಮೊದಲನೇ ಬಾರಿ ಈ ಸಮಿತಿಯನ್ನು ರಚಿಸಲ್ಪಟ್ಟಿರುವುದರಿಂದ ಸದನಕ್ಕೆ ವರದಿ ಸಲ್ಲಿಸಲು ಆರು ವಾರಗಳ ಕಾಲಾವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ: ೧೯೯೪-೯೫ನೇ ಸಾಲಿನ ಮೇಲಿನ ಇಲಾಖೆ ಬೇಡಿಕೆಗಳನ್ನು ಸಂಬಂಧಿಸಿದ ವಿಷಯ ಸಮಿತಿಗಳಿಗೆ ವಿವರವಾಗಿ ಪರಿಶೀಲಿಸಲು ಹಾಗೂ ಸಮಿತಿಯ ವರದಿಯನ್ನು ಸದನಕ್ಕೆ ಸಲ್ಲಿಸಲು ಈ ಸದನವು ಒಪ್ಪಬಹುದು. ಮೊದಲನೇ ಬಾರಿ ಈ ಸಮಿತಿಗಳು ರಚಿಸಲ್ಪಟ್ಟಿರುವುದರಿಂದ ಸದನಕ್ಕೆ ವರದಿ ಸಲ್ಲಿಸಲು ಆರು ವಾರಗಳು ಕಾಲಾವಕಾಶವನ್ನು ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿಗಳು). — ಮಾನ್ಯ ಸಭಾಪತಿಗಳೇ, (೧) ಕರ್ನಾಟಕ ಅರಣ್ಯ ಅಧಿನಿಯಮ ೧೯೬೩–೬೪ ಕರ್ನಾಟಕ ಅಧಿನಿಯಮ ೫(೨೯) ಪ್ರಕರಣದ ಒಂದನೇ ಪ್ರಕರಣದಿಂದ ಪ್ರದತ್ತ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಾಜ್ಯ ವಿಧಾನ ಮಂಡಲದ ಸದನಗಳ ಅನುಮೋದನೆ ಸಹಿತ ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನನ್ನು ೨೯ ಅಕ್ಟೋಬರ್ ೧೯೯೫ನೇ ದಿನಾಂಕದಿಂದ ಪರಿಣಾಮಕಾರಿ ಆಗುವಂತೆ ಮೀಸಲು ಅರಣ್ಯ ಆಗಿರುವುದು ನಿಂತು ಹೋಗುತ್ತದೆ ಎಂಬುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ. ಬೆಳಗಾಂ ಜಿಲ್ಲೆ ಆಥಣಿ ಖಾನಾಪುರ ಗ್ರಾಮ ಸರ್ವೇ ನಂಬರ್ ೨೭, ಆರು ಎಕರೆ ಪ್ರದೇಶವನ್ನು ಯುದ್ಧದಲ್ಲಿ ಮಡಿದ ಯೋಧ ದಿವಂಗತ ಶ್ರೀ ಕೃಷ್ಣ ಕಾಂಬ್ಳೆ ಇವರ ಪತ್ನಿ ಶ್ರೀಮತಿ ಗಂಗಾಧರ ಭಾಯಿ ಅವರಿಗೆ ಅರಣ್ಯೇತರ ಉದ್ದೇಶಕ್ಕಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

(೨) "ಕಾರವಾರ ತಾಲ್ಲೂಕಿನ ಕೋಡಿ ಭಾಗ ಗ್ರಾಮದಲ್ಲಿ ಅಂಚೆ ಕಚೇರಿ ಕಟ್ಟಡ ನಿರ್ಮಾಣ ಗೊಳಿಸಲು ಅರಣ್ಯ ನಾಶಕ್ಕಾಗಿ ನಿರ್ಣಯ ಮಂಡನೆ, ಮತ್ತು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಐನಾಪುರ ಗ್ರಾಮದಲ್ಲಿ ಜಮೀನನ್ನು ನಿರ್ವಿನೀಕರಣಗೊಳಿಸುವ ನಿರ್ಣಯಗಳನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : " (೧) ಕರ್ನಾಟಕ ಅರಣ್ಯ ಅಧಿನಿಯಮ ೧೯೬೩–೬೪ ಕರ್ನಾಟಕ ಅಧಿನಿಯಮ ೫(೨೮) ಪ್ರಕರಣದ ಒಂದನೇ ಪ್ರಕರಣದಿಂದ ಪ್ರದತ್ತ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಾಜ್ಯ ವಿಧಾನ ಮಂಡಲದ ಸದನಗಳ ಅನುಮೋದನೆ ಸಹಿತ ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನನು ೨೯ ಅಕ್ಟೋಬರ್ ೧೯೮೫ನೇ ದಿನಾಂಕದಿಂದ ಪರಿಣಾಮಕಾರಿ ಆಗುವಂತೆ ಮೀಸಲು ಅರಣ್ಯ ಆಗಿರುವುದು ನಿಂತು ಹೋಗುತ್ತದೆ ಎಂಬುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ. ಬೆಳಗಾಂ ಜಿಲ್ಲೆ ಅಥಣಿ ಐನಾಪುರ ಗ್ರಾಮ ಸರ್ವೇ ನಂಬರ್ ೨೭, ಆರು ಎಕರೆ ಪ್ರದೇಶವನ್ನು ಯುದ್ಧದಲ್ಲಿ ಮಡಿದ ಯೋಧ ದಿವಂಗತ ಶ್ರೀ ಕೃಷ್ಣ ಕಾಂಬ್ಳೆ ಇವರ ಪತ್ನಿ ಶ್ರೀಮತಿ ಗಂಗಾಧರ ಭಾಯಿ ಅವರಿಗೆ ಅರಣ್ಯೇತರ ಉದ್ದೇಶಕ್ಕಾಗಿ ಮಂಜೂರು ಮಾಡುವುದು.

(೨) ಕಾರವಾರ ತಾಲ್ಲೂಕಿನ ಕೋಡಿ ಭಾಗ ಗ್ರಾಮದಲ್ಲಿ ಅಂಚೆ ಕಚೇರಿ ಕಟ್ಟಡ ನಿರ್ಮಾಣ ಗೊಳಿಸಲು ಅರಣ್ಯ ನಾಶಕ್ಕಾಗಿ ನಿರ್ಣಯ ಮತ್ತು ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ ಐನಾಪುರ ಗ್ರಾಮದಲ್ಲಿ ಜಮೀನನ್ನು ನಿರ್ವಿನೀಕರಣಗೊಳಿಸಲು ನಿರ್ಣಯಗಳನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಕಟಣೆ

(i) ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ಮಸೂದೆಗಳ ಬಗ್ಗೆ.

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯಿಂದ ಈ ಕೆಳಕಂಡ ಸಂದೇಶವು ಬಂದಿದೆ, "ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ನಿಯಮ ೧೧ಳರ ಮೇರೆಗೆ ವಿಧಾನಸಭೆಯಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಸಭೆಯಲ್ಲಿ ದಿನಾಂಕ ೩೧ನೇ ಮಾರ್ಚ್ ೧೯೯೪ಳರಂದು ಅನುಮೋದಿಸಲಾಯಿತು ಎಂದು ತಿಳಿಸುತ್ತೇನೆ.

"ಕರ್ನಾಟಕ ಧನವಿನಿಯೋಗ ಲೇಖಾನುದಾನ ೧೯೯೪, ಕರ್ನಾಟಕ ಧನವಿನಿಯೋಗ ಸಂಖ್ಯೆ ಎರಡನೇ ವಿಧೇಯಕ ೧೯೯೪. ಕರ್ನಾಟಕ ಸರಕುಗಳ ಪ್ರವೇಶ ಮೇಲಣ ತೆರಿಗೆ ತಿದ್ದುಪಡಿ ವಿಧೇಯಕ ೧೯೯೪, ಕರ್ನಾಟಕ ತೆರಿಗೆ ಕಾನೂನು ತಿದ್ದುಪಡಿ ೧೯೯೪, ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ವಿಧೇಯಕ ೧೯೯೪ ಕರ್ನಾಟಕ ಮೋಟಾರು ವಾಹನ ತೆರಿಗೆ ವಿಧೇಯಕ ೧೯೯೪, ಕರ್ನಾಟಕ ಅತ್ಯಾವಶ್ಯಕ ಸೇವೆಗಳ ವಿಧೇಯಕ ೧೯೯೪, ಕರ್ನಾಟಕ ಅವಶ್ಯ ವಸ್ತುಗಳ ನಿಯಂತ್ರಣ ವಿಧೇಯಕ ೧೯೯೪."

(ii) ವಿಧಾನ ಮಂಡಲದ ಸಮಿತಿಗಳಿಗೆ ನಡೆದ ಚುನಾವಣೆ ಬಗ್ಗೆ .

ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ ವಿಧಾನ ಸಭೆಯಿಂದ ವಿವಿಧ ಸಮಿತಿಗಳಿಗೆ ಈ ಕೆಳಗೆ ಸೂಚಿಸಿರುವ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ.

೧) ಸಾರ್ವಜನಿಕ ಲೆಕ್ಕಪತ್ರ ಸಮಿತಿ :

ಶ್ರೀಯುತರುಗಳಾದ :

೧. ಎ. ನಾಗರಾಜು	೭. ಜಿ, ಎಸ್. ಶಿವನಂಜಪ್ಪ
೨. ಬಿ. ರಾಜುಗೌಡ	೮, ಮನೋಹರ ಐನಾಪುರ ತಹಶೀಲ್ದಾರ್
೩. ಬಿ. ಶಿವಣ್ಣ	೯. ಪಿ. ಜಿ. ಆರ್. ಸಿಂಧ್ಯ
೪. ಹಲಗೇಗೌಡ	೧೦. ಕೆ. ಬೈರೇಗೌಡ
೫. ಡಾ॥ ಎ. ಜಿ. ಮಾಲಕರೆಡ್ಡಿ	೧೧. ವಾಟಾಳ್ ನಾಗರಾಜ್
೬. ಎಂ. ಎಸ್. ಆತ್ಮಾನಂದ	೧೨. ರುಕ್ಮಯ್ಯ ಪೂಜಾರಿ